

ಕರ್ನಾಟಕ ರಾಜ್ಯ ರಿಸರ್ವ್ ಪೊಲೀಸ್ ಪಡೆಯ ಆಗಿನ ಮುಖ್ಯಸ್ಥರಾದ ಅಪ್ಪಣ್ಣ ಅವರ ಹೆಂಡತಿ ಬೊಳ್ಳಮ್ಮ ಅವರು ನಮ್ಮ ತಾಯಿಯ ಬಾಲ್ಯದ ಗೆಳತಿ. ಒಂದು ಬಾರಿ ಅವರಿಬ್ಬರೂ ನಮ್ಮ ಮನೆಗೆ ಬಂದಾಗ, ಶಿವಾಜಿರಾವ್ ಸಾವಂತ್ ಕುರಿತು ಅವರ ಬಳಿ ಹೇಳಿದೆ. ಅಷ್ಟರಲ್ಲಿ ಆತ 'ಅಮ್ಮಾ, ಒಂದು ರೊಟ್ಟಿ ಕೊಡಿ ಪ್ಲೀಸ್' ಎಂದು ನಮ್ಮ ತಾಯಿಯನ್ನು ಕರೆದ. ಇದೇ ಅವಕಾಶವೆಂದು ನಾನು ಅಪ್ಪಣ್ಣ ಅಂಕಲ್ ಅವರಿಗೆ, ಇವನೇ ಶಿವಾಜಿರಾವ್ ಎಂದು ಹೇಳಿ, 'ಈತನೊಬ್ಬ ದೊಡ್ಡ ವ್ಯಕ್ತಿ. ನಿಮಗೆ ಪರಿಚಯವಿದೆಯಲ್ಲವೇ?' ಎಂದೆ. ಅವರನ್ನು ಮತ್ತು ಬಾಗಿಲಲ್ಲಿ ನಿಂತ ಕಾರನ್ನು ನೋಡಿದ ಶಿವಾಜಿರಾವ್ ರೊಟ್ಟಿಗಾಗಿ ಕಾಯದೇ ಅಲ್ಲಿಂದ ಓಟಕಿತ್ತ. ನನಗೆ ಆಶ್ಚರ್ಯ ಮತ್ತು ಸಿಟ್ಟು ಎರಡೂ ಒಟ್ಟಿಗೆ ಮೂಡಿದ್ದವು. ಅಪ್ಪಣ್ಣ ಅಂಕಲ್ ಅವರ ಪರಿಚಯ ಮಾಡಿಕೊಳ್ಳದಷ್ಟು ದುರಹಂಕಾರವೇ ಅವನಿಗೆ ಎನ್ನಿಸಿತ್ತು.

ಆಗ ನನ್ನ ಎರಡನೆಯ ಅಣ್ಣ ಪಿಯುಸಿ ದ್ವಿತೀಯ ವರ್ಷದಲ್ಲಿದ್ದ. ಒಂದು ದಿನ ಎಲ್ಲ ಮಕ್ಕಳು ಆತನ ಎದುರು ನೆರೆದಿದ್ದರು. ತನ್ನ ವಶೀಲಿಯ ಮೂಲಕ ನಿಮಗೆ ಉತ್ತಮ ಅಂಕಗಳನ್ನು ದೊರಕಿಸಿಕೊಡುವುದಾಗಿ ಆಶ್ವಾಸನೆ ನೀಡುತ್ತ ಆತ ಅವರ ರೋಲ್ ನಂಬರ್‌ಗಳನ್ನು ಬರೆದುಕೊಳ್ಳುತ್ತಿದ್ದ. ನಮ್ಮ ಅಣ್ಣನಿಗೂ ಉತ್ತಮ ಅಂಕಗಳು ಸಿಗಬೇಕೆಂಬ ಆಸೆಯಿಂದ ಅವನ ಹಾಲ್ ಟಿಕೆಟ್ ತೆಗೆದುಕೊಂಡು ಶಿವಾಜಿರಾವ್‌ನ ಎದುರು ನಿಂತೆ. ಅದರ ಮೇಲೆ ಆತ ಇನ್ನೇನು ಪೆನ್‌ನಿಂದ ಗುರುತು ಹಾಕುವಷ್ಟರಲ್ಲಿ ನಮ್ಮ ದೊಡ್ಡ ಅಣ್ಣ, 'ಏನು ಮಾಡುತ್ತಿದ್ದೀಯ?' ಎಂದು ಒಂದು ಕೂಗು ಹಾಕಿದ. ಶಿವಾಜಿರಾವ್, ಹಾಲ್ ಟಿಕೆಟ್‌ನ್ನು ನನ್ನ ಕೈಗೆ ವಾಪಸ್ ಕೊಟ್ಟು, ನಿಮ್ಮ ಅಣ್ಣನಿಗೆ ಒಳ್ಳೆಯ ಮಾರ್ಕ್ ಸಿಗದಿದ್ದರೆ ಅದಕ್ಕೆ ದೊಡ್ಡ ಅಣ್ಣನೇ ಕಾರಣವಾಗುವನು ಎಂದು ಹೇಳಿ ಓಡಿಹೋದ. ಅಣ್ಣನಿಗೆ ನಾನು ಹಾಲ್ ಟಿಕೆಟ್ ಶಿವಾಜಿರಾವ್‌ನ ಬಳಿ ಒಯ್ದ ಕಾರಣ ತಿಳಿಸಿದಾಗ, ಆತ ತುಸು ಕೋಪದಿಂದ ನನ್ನ ತಲೆಯ ಮೇಲೆ ಮೊಟಕಿ, ಮನೆಗೆ ಹೋಗು ಎಂದು ಬೈದ. ಅಂದಿನಿಂದ ಶಿವಾಜಿರಾವ್‌ನ ಸುತ್ತಮುತ್ತ ಸುಳಿದಾಡುವುದಕ್ಕೆ ನನ್ನ ಮೇಲೆ ನಿರ್ಬಂಧ ಹೇರಲಾಯಿತು.

ಹೀಗೊಂದು ದಿನ ನಾವು ಆಟವಾಡುತ್ತಿದ್ದಾಗ ಮೆಟಡೋರ್ ಒಂದು ನಮ್ಮ ಕಾಂಪೌಂಡ್‌ನಲ್ಲಿ ಬಂದು ನಿಂತಿತು. ಅದರಿಂದ ನಾಲ್ಕೈದು ವ್ಯಕ್ತಿಗಳು ಸರಸರನೆ ಇಳಿದು, ಶಿವಾಜಿರಾವ್‌ನನ್ನು ಗಟ್ಟಿಯಾಗಿ ಹಿಡಿದು, ನೆಲದ ಮೇಲೆ ಕೂಡಿಸಿ, ಆತನ ಕೂದಲನ್ನು ಕತ್ತರಿಸಲಾರಂಭಿಸಿದರು. ನಮ್ಮ ತಂದೆ ಅವರಿಗೆ ಏನೇನೋ ಸೂಚನೆಗಳನ್ನು ಕೊಡಲಾರಂಭಿಸಿದರು. ಶಿವಾಜಿರಾವ್, ಜೋರಾಗಿ ಕೂಗುತ್ತ, 'ಏಯ್ ಬೇಬಿ, ನಾನು ಹೇಳುತ್ತಿದ್ದೆನಲ್ಲ, ಇವರೇ ಆ ಕಾಳಸಂತೆಕೋರರು. ನಿಮ್ಮ ತಂದೆಯೂ ಇವರ ಜೊತೆ ಶಾಮೀಲಾಗಿದ್ದಾರೆ. ನನ್ನನ್ನು ಬಿಟ್ಟು ಬಿಡಲು ನಿಮ್ಮ ತಂದೆಗೆ ಹೇಳು' ಎಂದು ಅರಚಲಾರಂಭಿಸಿದ.

ಅಲ್ಲಿ ಸೇರಿದ ಮಕ್ಕಳನ್ನು ಮನೆಗೆ ಓಡಿಸಲಾಯಿತು. ನಾನು ಗಾಬರಿಗೊಂಡಿದ್ದೆ. ಮುಂದೆ ಕೆಲವು ದಿನ ಅಣ್ಣನೊಂದಿಗೆ ಮಾತನಾಡಲೂ ಭಯವಾಗುತ್ತಿತ್ತು. ಶಿವಾಜಿರಾವ್‌ನ ಅನುಪಸ್ಥಿತಿ ನನ್ನನ್ನು ಬಹಳವಾಗಿ ಕಾಡುತ್ತಿತ್ತು.

ಕಾಲ ಎಲ್ಲವನ್ನೂ ಮರೆಸುತ್ತದೆ. ನಾನೂ ಶಿವಾಜಿರಾವ್‌ನನ್ನು ಮರೆಯಲಾರಂಭಿಸಿದ್ದೆ.

ಒಂದು ದಿನ ಕೃಶಕಾಯದ ವ್ಯಕ್ತಿಯೊಬ್ಬ 'ಅಮ್ಮಾ ಏನಾದ್ರೂ ತಿನ್ನಾಕ ಕೊಡ್ರಿ' ಎಂದ. ಆತನನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಕಣ್ಣುಗಳು ನಿಸ್ತೇಜವಾಗಿದ್ದವು. ಮುಖದಲ್ಲಿ ಶಾಂತತೆಯ ಭಾವ. ಆತ ಸುಸ್ತಾದವನಂತೆ ಕಾಣುತ್ತಿದ್ದ. ನಮ್ಮ ತಾಯಿ ಅವನಿಗೆ ಊಟ ಬಡಿಸಿದರು. ನಿಮ್ಮ ಹೆಸರೇನೆಂದು ನಾನು ಕೇಳಿದೆ. ಆತ ತನ್ನ ಹೆಸರು ಹೇಳಿದ. ನಮ್ಮ ತಾಯಿಗೆ ಇವರು ಯಾರೆಂದು ಕೇಳಿದಾಗ, ನೀವೆಲ್ಲ ಆತನನ್ನು ಶಿವಾಜಿರಾವ್ ಎನ್ನುತ್ತಿದ್ದಿರಲ್ಲ ಅವನೇ ಇವನು ಎಂದರು. ನನಗೆ ಅವನನ್ನು ನೋಡಿ ಪಿಚ್ಚೆನ್ನಿಸಿತು. ಯಾವಾಗಲೂ ಆಸಕ್ತಿ ಕೆರಳಿಸುವ, ಮನೋರಂಜಕ ಶಿವಾಜಿರಾವ್ ಎಲ್ಲಿ ಮತ್ತು ಎಲ್ಲರಂತೆ ಸಾಧಾರಣ ಹೆಸರಿರುವ ಈ ಸಾಮಾನ್ಯ ವ್ಯಕ್ತಿ ಎಲ್ಲಿ?

ಮಾರನೆಯ ದಿನ ಅಣ್ಣ, ಅವನಿಗೆ ಸ್ವಲ್ಪ ದುಡ್ಡು ಮತ್ತು ಕೆಲವು ಬಟ್ಟೆಗಳನ್ನು ಕೊಟ್ಟರು. ಅವನು ಅವರ ಮತ್ತು ನಮ್ಮ ತಾಯಿಯ ಕಾಲು ಮುಟ್ಟಿ ನಮಸ್ಕರಿಸಿದ. 'ನೀನೇಕೆ ಇಂಗ್ಲಿಷ್ ಮಾತನಾಡುತ್ತಿಲ್ಲ, ಜೋರುಜೋರಾಗಿ ನಗುತ್ತಿಲ್ಲ ಮತ್ತು ನೀನೆಲ್ಲಿ ಹೊರಟಿದ್ದೀಯ' ಎಂದು ನಾನು ಕೇಳಿದೆ. ನಿನ್ನಂತಿರುವ ತನ್ನ ಮಕ್ಕಳ ಬಳಿ ಆತ ವಾಪಸ್ ಹೋಗುತ್ತಿದ್ದಾನೆ ಎಂದು ಅಣ್ಣ ಹೇಳಿದರು. ನನಗೆ ದುಃಖ ಉಕ್ಕಿ ಬಂದಿತ್ತು. ಮುಂದೆ ನಿನಗೆ ಎಲ್ಲ ಅರ್ಥವಾಗುತ್ತದೆ ಎಂದು ಅಣ್ಣ ಸಮಾಧಾನ ಮಾಡಿದರು. ಆ ವ್ಯಕ್ತಿ ಕಾಂಪೌಂಡ್ ದಾಟಿ ಹೊರಗಿನ ಜನ ದಟ್ಟಣೆಯಲ್ಲಿ ಲೀನನಾದ.

ಸುಮಾರು ವರ್ಷಗಳ ನಂತರ ಅಣ್ಣ ಆ ವ್ಯಕ್ತಿಗೆ ಮಾಡಿದ ಉಪಕಾರದ ಅರಿವು ನನಗಾಯಿತು. ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡ ಅನೇಕ ಶಿವಾಜಿರಾವ್ ಸಾವಂತ್‌ರನ್ನು ನಮ್ಮ ಮಧ್ಯದಲ್ಲಿ ನಾವು ಕಾಣುತ್ತಿರುತ್ತೇವೆ. ಆತ ಈಗ ತನ್ನ ಮೊಮ್ಮಕ್ಕಳೊಂದಿಗೆ ಸುಖವಾಗಿರುವನೆಂದು ನಾನು ನಂಬಿದ್ದೇನೆ. 40 ವರ್ಷಗಳ ಹಿಂದೆಯೇ ಪ್ರಗತಿಶೀಲ ಮನೋಭಾವದ ನಮ್ಮ ತಂದೆಯ ಸಮಯಪ್ರಜ್ಞೆಯಿಂದ ಒಂದು ಕುಟುಂಬ ಉಳಿದದ್ದನ್ನು ನೆನಪಿಸಿಕೊಂಡು ನನಗೆ ಅವರ ಬಗ್ಗೆ ಹೆಮ್ಮೆ ಎನಿಸಿತು.

ಪ್ರತಿಕ್ರಿಯಿಸಿ: **feedback@sudha.co.in**